ಬಂದು ತೂಬಿನ ನಾಲೆಯನ್ನು ಕಟ್ಟುವುದಕ್ಕೆ ಅವಶ್ಯಕವಾಗಿವೆ; ಮತ್ತು / ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಫೈಂಬ್ರಾಕ್ಸ್ ಸಬ್-ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಿಪ್ಪಸು.	ತಾಲೂಕು.	ಹೋಬಳಿ.	ಗ್ರಾಮ.	ತಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯಿತು.	ಒಟ್ಟು ವಿಸ್ತೀರ್ಣ.		ಕಂದಾಯ.		ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ.	ಅ.					
ಮೈಸೂರು	ಕೃಷ್ಣರಾಜನಗರ	ಚಿನಕುರಳಿ	ಹಾದನೂರು	ಮುದ್ದೆಗೌಡ.	72	ಖುಷ್ಕಿ ಮತ್ತು ಬಾಗಾಯಿತು.	3	21	6	8	ಖುಷ್ಕಿ 4	ಸರ್ವೆ ನಂ. 176	ಕೆರೆಯ ಕಟ್ಟೆ.	ಕೆರೆಯ ಕಟ್ಟೆ	ಹಳ್ಳ ಮತ್ತು ಸರ್ವೆ ನಂ. 70.
				ಬೈರೇದೇವರು.	74	ಖುಷ್ಕಿ ಮತ್ತು ತರಿ.	0	39	1	12	ತರಿ 8	ಕೆರೆಯ ಕಟ್ಟೆ	ಕೆರೆಯ ಕಟ್ಟೆ ಮತ್ತು ಸರ್ವೆ ನಂ. 72	ಡಿಟೋ	ಹಳ್ಳ

ಹುಕುಂ ಬಮೋಜೇಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ಬೆಂಗಳೂರು, ತಾರೀಖು 15ನೆ ಆಗಸ್ಟ್ 1907ನೆ ಇಸವಿ.

ನಂ. 770—5811, ಬೆಂಗಳೂರು ಸ್ಪೆಷಲ್ ಡ್ಯೂಟಿ ಎಗ್ಸಿಕ್ಯೂಟೀವ್ ಇಂಜನಿಯರ್ ಆಫೀಸಿಗೆ ಕೇರಿದ ಸಬ್ ಅಸಿಸ್ಟೆಂಟು ಇಂಜನಿಯರ್ ಮೆ॥ ಕೆ. ಎಂ. ವಾಸುದೇವ ರಾಯರನ್ನು ರಜಾ ತೀರಿಬಂದ ನಂತರ ಪಶ್ಚಿಮ ಸರ್ಕಲ್‌ಗೆ ವರ್ಗಾಯಿಸಲ್ಪಟ್ಟಿರುತ್ತೆ.

ಹುಕುಂ ಬಮೋಜೇಬ್,
ಬರ್ನಾರ್ಡ್‌ಷಾಸ್, ಕ್ಯಾಪ್ಟನ್, ಆರ್. ಇ.,
ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ ಅಂಡರ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 15ನೆ ಆಗಸ್ಟ್ 1907.

ನಂ. 935, ಇದರಡಿ ಕಂಡ ದೊಡ್ಡ ಮನುಷ್ಯರುಗಳು ಮಾಲೂರಿನಲ್ಲಿರುವ ಸರ್ಕಾರದ ಅನ್ನ ಛತ್ರದ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

1. ಎಕ್ಸ್ ಅಫಿಷಿಯೋ ಸಬ್ ರಿಜಿಸ್ಟ್ರಾರ್.
2. ಎಕ್ಸ್ ಅಫಿಷಿಯೋ ತಾಲ್ಲೂಕು ಶಿರಸ್ತೇದಾರ್.
3. ಮೆ॥ ರಾ॥ ರಾ॥ ರಿಟೈರ್ಡ್ ಹೆಡ್ ಗುಮಾಸ್ತಾದಾರ್, ಶ್ರೀನಿವಾಸಯ್ಯಂಗಾರ್.
4. ,, ನಂಬರ್ ನಾರಾಯಣ ಶೆಟ್ಟರು.

ತಾರೀಖು 15ನೆ ಆಗಸ್ಟ್ 1907.

ನಂ. 938, ಇದರಡಿ ಕಂಡ ದೊಡ್ಡ ಮನುಷ್ಯರುಗಳು ದೇವನಹಳ್ಳಿಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿಯವರ ದೇವಸ್ಥಾನದ ಮೇಲ್ವಿಚಾರಣೆ ನೋಡಿಕೊಳ್ಳುವದಕ್ಕೆ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

1. ಮೆ॥ ರಾ॥ ರಾ॥ ಮಾಧವರಾವ್, ರಿಟೈರ್ಡ್ ಶೇಕದಾರ್.
2. ,, ,, ಎಲೆ ಕೃಷ್ಣಪ್ಪ.